ಸಾಕ್ಷಿಯನ್ನು ದಿನಾಂಕಃ **24-03-2021** ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ ವಕೀಲರಾದ ಶ್ರೀ ಆರ್ ಜಿ ಪಿ ರವರ ಪರವಾಗಿ ಶ್ರೀ ಬಿ ಟಿ ಹೆಚ್ ರವರಿಂದಃ

ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ವಿಷಯಗಳೆಲ್ಲವು ಸತ್ಯವಾಗಿರುತ್ತದೆ.

ನಾನು ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ದಿನಾಂಕಃ 24-09-2016 ರ ಪ್ರಾಂಸರಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ಸದರಿ ಪತ್ರದಲ್ಲಿಪ್ರತಿವಾದಿಯ ಸಹಿ ಇದೆ ಎಂದು ಸಾಕ್ಷಿಯು ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ಸಾಕ್ಷಿದಾರರಾಗಿ ನಟರಾಜ್ ತಂದೆ ಕೆಂಚಪ್ಪ ಮತ್ತು ಹನಮತಂಪ್ಪ ಎನ್ನುವರು ಸಹಿ ಮಾಡಿರುತ್ತಾರೆ. ದಿನಾಂಕಃ 12-03-2019 ರಂದು ಪ್ರತಿವಾದಿಗೆ ವಕೀಲರ ಮೂಲಕ ಕಳುಹಿಸಿದ ಲೀಗಲ್ ನೊಟಿಸ್ ನ ಕಛೇರಿ ಪ್ರತಿಯನ್ನು ನಿಪಿ 2 ಎಂದು, ಸದರಿ ನೋಟಿಸ್ ನ್ನು ಕಳುಹಿಸಿದ ಬಗ್ಗೆ ಅಂಚೆ ರಶೀದಿಯನ್ನು ನಿಪಿ 3 ಎಂದು, ಸದರಿ ನೊಟೀಸ್ ತಲುಪಿದ ಬಗ್ಗೆ ಅಂಚೆ ಸ್ವೀಕೃತಿಯನ್ನು ನಿಪಿ 4 ಎಂದು, ದಿನಾಂಕಃ 20-03-2019 ರಂದು ಪ್ರತಿವಾದಿಯು ತನ್ನ ವಕೀಲರ ಮೂಲಕ ನೀಡಿರುವ ಪ್ರತ್ಯುತ್ತರ ನೋಟಿಸ್ ನ್ನು ನಿಪಿ 5 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ..

ಸಾಕ್ಷಿಯ ಪಾಟೀಸವಾಲಿಗಾಗಿ ಪ್ರತಿವಾದಿಯ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**